## ಹೆಸರು



ಮೂರೂವರೆ ವರ್ಷದ ನನ್ನ ತಂಗಿಯ ಮೊಮ್ಮಗ ಸ್ವಲ್ಪ ತಡವಾಗಿ ಮಾತನಾಡುವುದಕ್ಕೆ ಶುರು ಮಾಡಿದ. ಈಗಂತೂ ಮಾತಿನ ಮಲ್ಲನೇ ಆಗಿದ್ದಾನೆ. ಇತ್ತೀಚೆಗೆ ಮನೆ ಹತ್ತಿರದ ಖಾಸಗಿ ಶಾಲೆಯೊಂದರಲ್ಲಿ ನರ್ಸರಿಗೆ ಸೇರಿಸಲಾಗಿದೆ. ಒಂದು ವಾರದ ಮೇಲೆ ಶಾಲೆಗೆ ಹೋಗಿ ಬರುವುದು ಅಭ್ಯಾಸವಾಯಿತು. ಅಂದು ಮನೆಯಲ್ಲಿ ಎಲ್ಲರೂ ಕುಳಿತಿರುವಾಗ 'ನಿಮ್ಮ ಮ್ಯಾಮ್ ಹೆಸರೇನು?' ಅಂತ ಕೇಳಿದೆವು. ಆತ ತುಸು ಯೋಚಿಸಿ, 'ಪ್ರೆಸೆಂಟ್' ಎಂದು ಹೇಳಿದ. 'ಪ್ರೆಸೆಂಟ್ ಅಂತ ಹೆಸರಿರುತ್ತೇನೊ?' ಎಂದು ಕೇಳಿದಾಗ ಆತನಿಂದ, 'ಹು, ದಿನಾ ಎಲ್ಲರೂ ಅವರಿಗೆ ಪ್ರೆಸೆಂಟ್ ಮ್ಯಾಮ್... ಪ್ರೆಸೆಂಟ್ ಮ್ಯಾಮ್... ಅಂತಲೇ ಕರೆಯೋದು' ಎನ್ನುವ ಉತ್ತರ ಬಂತು. ಮಕ್ಕಳ ಹಾಜರಾತಿ ತೆಗೆದುಕೊಳ್ಳುವಾಗ ಎಲ್ಲರೂ ಪ್ರೆಸೆಂಟ್ ಮ್ಯಾಮ್ ಎಂದು ಹೇಳುವುದನ್ನೇ ಅವನು ಹೆಸರು ಎಂದು ಅರ್ಥ ಮಾಡಿಕೊಂಡಿದ್ದು ತಿಳಿದು ನಕ್ಕೆವು.

**ಟಿ.ಎಸ್. ಪ್ರತಿಭಾ**

---



ಕಲೆ: ಗಣೇಶ ಆಚಾರ್ಯ

## ಕತ್ತಲಾದ ಮೇಲೆ ಹೋಗ್ಬಾರ್ದು

ಕೆಲವೊಮ್ಮೆ ಮಕ್ಕಳಿಗೆ ಹೇಳಿದ ಬುದ್ಧಿಮಾತು ಹಿರಿಯರಿಗೇ ತಿರುಮಂತ್ರ ಆಗುವುದಿದೆ. ಒಮ್ಮೆ ನಮ್ಮ ಮೂರು ವರ್ಷದ ಪುಟಾಣಿ ಮೊಮ್ಮಗಳು ಮುಸ್ಸಂಜೆ ವೇಳೆ ಎಲ್ಲಿಗಾದ್ರೂ ಹೊರಗೆ ಕರೆದುಕೊಂಡು ಹೋಗು ಎಂದು ಹಟ ಹಿಡಿದಳು. 'ಈಗ ಕತ್ತಲಾಯ್ತಲ್ಲಾ, ಹೊರಗೆ ಹೋಗ್ಬಾರ್ದು... ಗುಮ್ಮ ಇರುತ್ತೆ' ಎಂದು ಏನೊ ಒಂದು ನೆಪ ಹೇಳಿ ಸಮಾಧಾನ ಮಾಡಿದೆ. ವಾರವೊಂದರಲ್ಲಿ ಅಣ್ಣ– ಅತ್ತಿಗೆ ಮನೆಗೆ ಬಂದರು. ಊಟ–ಉಪಚಾರವೆಲ್ಲಾ ಮುಗಿದು, ಸಂಜೆ ಕಾಫಿಯ ನಂತರ ಅವರು ಹಿಂತಿರುಗುವಾಗ ಮುಸ್ಸಂಜೆಯಾಗಿತ್ತು. ವಾಡಿಕೆಯಂತೆ ಎಲ್ಲರಿಗೂ ಬೈ ಹೇಳಿ, ಪುಟ್ಟಿಗೂ ಟಾಟಾ ಮಾಡುವುದೇ ತಡ, 'ಈಗ ಕತ್ತಲಾಯ್ತಲ್ಲ ಯಾರೂ ಹೊರಗೆ ಹೋಗುವಂತೆಯೇ ಇಲ್ಲ... ಗುಮ್ಮ ಇರುತ್ತೆ' ಎಂದು ಶಾಸನ ವಿಧಿಸಿದಳು.

**ಸುಶೀಲಾ ಆರ್. ರಾವ್**